

ಸಮುದಾಯ ಬೀಜ ಬ್ಯಾಂಕ್ (ಸಂಗ್ರಹ ಚಿತ್ರ)



ಒಳಗೊಂಡಿರುತ್ತದೆ. ಸ್ಥಳೀಯ ರೈತರಿಗೆ ಉಚಿತವಾಗಿ ಹಾಗೂ ಆಸಕ್ತ ಇತರರಿಗೆ ಈ ಕಿಟ್‌ಗಳನ್ನು ಮಾರಾಟ ಮಾಡಲಾಗುತ್ತದೆ.

ರಾಸಾಯನಿಕಮುಕ್ತ ಆಹಾರ ಪದಾರ್ಥಗಳ ಬಗ್ಗೆ ನಗರ, ಪಟ್ಟಣ ಪ್ರದೇಶಗಳಲ್ಲಿ ಅರಿವು ಮೂಡಿಸುವ ಸೊಪ್ಪು ಮೇಳ, ಅಕ್ಕಿ ಮೇಳ, ಹಲಸು ಮೇಳ ಇತ್ಯಾದಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಬೀಬಿ ಫಾತಿಮಾ ಮಹಿಳಾ ಸಂಘದ ಸದಸ್ಯರು, ದೇಸಿ ಶೈಲಿಯ ಅಡುಗೆ ತಯಾರಿಸಿ ಮಾರಾಟ ಮಾಡುತ್ತಾರೆ. ಇವರು ತಯಾರಿಸುವ ಜೋಳ ಹಾಗೂ ಸಜ್ಜೆ ರೊಟ್ಟಿ, ಎಣ್ಣೆಗಾಯಿ, ಶೇಂಗಾಪುಡಿ, ಮೊಸರು, ಚೌಳಿ ಪಲ್ಲೆ ಮುಂತಾದ ಉತ್ತರ ಕರ್ನಾಟಕದ ತಿನಿಸುಗಳು ಗ್ರಾಹಕರ ಅಚ್ಚುಮೆಚ್ಚು. ಅಲ್ಲದೆ ಶಾವಿಗೆ, ಹುರುಳಿ ಹಿಟ್ಟು ಮತ್ತಿತರೆ ಮೌಲ್ಯವರ್ಧಿತ ಪದಾರ್ಥಗಳನ್ನು ಉತ್ಪಾದಿಸಿ ಗ್ರಾಹಕರಿಗೆ ತಲುಪಿಸಲಾಗುತ್ತಿದೆ. ಇದು ದೇಸಿ ಬಿತ್ತನೆ ಬೀಜಗಳು ಹಾಗೂ ಆಹಾರ ಸಂಸ್ಕೃತಿಯನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವ ಪ್ರಯತ್ನ.

ಬೀಜ ಬ್ಯಾಂಕ್ ಸ್ಥಾಪನೆಯ ನಂತರ ರೈತರು ಯಥೇಚ್ಛವಾಗಿ ಸಿರಿಧಾನ್ಯಗಳನ್ನು ಬೆಳೆಯಲು ಆರಂಭಿಸಿದರು. ಆಗ ಸಿರಿಧಾನ್ಯಗಳನ್ನು ಖರೀದಿಸಿ ಅಕ್ಕಿ ಮಾಡಲು ಸಂಸ್ಕರಣಾ ಘಟಕದ ಅಗತ್ಯ ಕಂಡುಬಂದಿತು. ಆಗ ಹಲವು ಸಂಸ್ಥೆಗಳು ಇವರಿಗೆ ಸಹಾಯಹಸ್ತ ಚಾಚಿದವು. ಮುಖ್ಯವಾಗಿ ಹೈದರಾಬಾದ್‌ನ ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆ (IIMR) ಮತ್ತು CROPS4HD ಆರ್ಥಿಕ ಸಹಕಾರ, ಮಿಲ್ಲೆಟ್ ಫೌಂಡೇಶನ್‌ನ ತಾಂತ್ರಿಕ ಸಹಕಾರ ಮತ್ತು ಹುಲಕೋಟೆಯ ಕೆ.ಎಚ್. ಪಾಟೀಲ್ ಕೃಷಿ ವಿಜ್ಞಾನ ಕೇಂದ್ರದ ಉಸ್ತುವಾರಿಯಲ್ಲಿ 2021 ರಲ್ಲಿ ಸುಸಜ್ಜಿತ ಸಿರಿಧಾನ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲಾಯಿತು. ಸೆಲ್ಕೊ ಫೌಂಡೇಷನ್ ಈ ಘಟಕಕ್ಕೆ ಸೌರಶಕ್ತಿ ಚಾಲಿತ ವಿದ್ಯುತ್ ವ್ಯವಸ್ಥೆಯನ್ನು ಒದಗಿಸಿದೆ. ಇಲ್ಲಿ ಸಿರಿಧಾನ್ಯಗಳ ಸಂಸ್ಕರಣೆ ಜೊತೆಗೆ ರಾಗಿ ದೋಸೆ ಮಿಶ್ರಣ, ಮಲ್ಟಿ ಗ್ರೇನ್ ಅಟ್ಟಾ, ರಾಗಿ ಮಾಲ್ಟ್, ವಿವಿಧ ಧಾನ್ಯಗಳ ಹಿಟ್ಟು ಮುಂತಾದ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿದೆ. ಎಲ್ಲವನ್ನೂ ಮಹಿಳೆಯರೇ ನಿರ್ವಹಿಸುತ್ತಾರೆ. ಮೇಲಿನ ಸಂಸ್ಥೆಗಳ ಜೊತೆಗೆ ಕೃಷಿ ಇಲಾಖೆ ಮತ್ತು ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು ಅಗತ್ಯ ಸಹಕಾರ ಒದಗಿಸುತ್ತಿವೆ. ದೇವಧಾನ್ಯ ರೈತ ಉತ್ಪಾದಕರ ಕಂಪನಿಯು ಮಾರುಕಟ್ಟೆ ಉಸ್ತುವಾರಿ ಹೊತ್ತಿದೆ.



‘ಹಳ್ಳಿ ಮಟ್ಟದಲ್ಲಿ ಕೃಷಿಯಾಧಾರಿತ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಈ ಮಹಿಳಾ ಸಂಘದ ಮಾದರಿ ಅನುಕರಣಿಯೋಗ್ಯ. ಕರ್ನಾಟಕ ಸರ್ಕಾರ ಈ ಮಹಿಳಾ ಸಂಘದ ಸಾಧನೆಯನ್ನು ಗುರುತಿಸಿ, ಅಗತ್ಯ ಸಹಕಾರ ನೀಡಿದರೆ ಇವರ ಮೂಲಕ ಇನ್ನಷ್ಟು ಹಳ್ಳಿಗಾಡಿನ ರೈತ ಮಹಿಳೆಯರನ್ನು ಬೀಜ ಸಂರಕ್ಷಣೆಗೆ ತೊಡಗಿಸಬಹುದು. ಸ್ಥಳೀಯ ಬೀಜ ವೈವಿಧ್ಯವನ್ನು ಸಂರಕ್ಷಿಸಬಹುದು’ ಎಂಬುದು ಸಹಜ ಸಮೃದ್ಧದ ಅನಿತಾ ರೆಡ್ಡಿಯವರ ಅನಿಸಿಕೆ.

ಸಂಘದ ಸದಸ್ಯರಾದ ಬೀಬಿಜಾನ್ ಹಳೇಮನಿ ಎಲ್ಲರನ್ನೂ ಒಂದುಗೂಡಿಸಿ ಮುನ್ನಡೆಸುವ ಜವಾಬ್ದಾರಿ ಹೊತ್ತಿದ್ದಾರೆ. ಇಡೀ ಗ್ರಾಮದಲ್ಲಿ ಕಾಲೇಜು ಮೆಟ್ಟಿಲು ಹತ್ತಿದ ಮೊದಲ ಪದವೀಧರೆ. ‘ಪ್ರಶಸ್ತಿ ಬರದಿದ್ದರೆ ಹೆಂಗೋ ನಡೀತಿತ್ರಿ, ಈಗ ಬಂದ ಮೇಲೆ ನಾವು ಇನ್ನೂ ಜಾಗ್ರತೆ ನಡೀಬೇಕು, ನಾಲಕ ಜನರ ಕಣ್ಣು ನಮ್ಮನ್ನ ನೋಡ್ತಿರ್ತಾವು’ ಎನ್ನುವ ಅವರ ಮಾತುಗಳು ಸಂಘದ ಮುಂದಿನ ನಡೆಗಳ ಸ್ಪಷ್ಟತೆಯನ್ನು ಧ್ವನಿಸುತ್ತವೆ.

ತೆನೆತೆನೆಗೂಡಿ ರಾಶಿಯಾಗುವಂತೆ ಎಲ್ಲರ ಸಹಕಾರವನ್ನು ಬಳಸಿಕೊಂಡು ಒಣಭೂಮಿಯಲ್ಲಿ ಕೃಷಿ ಜೀವವೈವಿಧ್ಯ ಸಂರಕ್ಷಣೆ, ರೈತ ಮಾರುಕಟ್ಟೆ, ಸಣ್ಣ ಜೀವಾದಿಗಳ ಸಾಕಣೆ, ಸುಸ್ಥಿರ ಕೃಷಿ ಅಳವಡಿಕೆ ವಿಧಾನಗಳ ಮೂಲಕ ರೈತ ಕುಟುಂಬಗಳ, ಅದರಲ್ಲಿಯೂ ಮಹಿಳೆಯರ ಆರ್ಥಿಕ ಮಟ್ಟವನ್ನು ಸುಧಾರಿಸುವ ಪ್ರಯತ್ನದಲ್ಲಿ ಸಂಘವು ತೊಡಗಿಕೊಂಡಿರುವುದು ಮಹತ್ತರವಾದುದು.

ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿ ಸಹಯೋಗದೊಂದಿಗೆ ‘ಜೀವ ವೈವಿಧ್ಯ ಸಂರಕ್ಷಾ ಕೇಂದ್ರವನ್ನು’ ಕಟ್ಟುವ ಕನಸು ಇವರದಾಗಿದೆ. ಉತ್ತರ ಕರ್ನಾಟಕದ ಬೀಜ ವೈವಿಧ್ಯವನ್ನು ಈ ಕೇಂದ್ರದಲ್ಲಿ ಸಂರಕ್ಷಿಸಿಡುವ ಆಶಯ ಇವರದು.

## ಸುಸ್ಥಿರ ಅಭಿವೃದ್ಧಿ, ಜೀವವೈವಿಧ್ಯ ಸಂರಕ್ಷಣೆ ಪ್ರೋತ್ಸಾಹಕ್ಕೆ ಪ್ರಶಸ್ತಿ

ಈ ವರ್ಷದ ‘ಈಕ್ವೇಟರ್ ಇನಿಷಿಯೇಟಿವ್ ಪ್ರಶಸ್ತಿ’ ಆಯ್ಕೆಯು ಪ್ರಕೃತಿ ಆಧಾರಿತ ಹವಾಮಾನ ಕ್ರಿಯೆಗಾಗಿ ಮಹಿಳೆಯರು ಮತ್ತು ಯುವ ನಾಯಕತ್ವ ಎಂಬ ವಿಷಯವನ್ನು ಆಧರಿಸಿತ್ತು. ತಮ್ಮ ವ್ಯಾಪ್ತಿಯಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ಜೀವವೈವಿಧ್ಯ ಸಂರಕ್ಷಣೆಗಾಗಿ ಕೊಡುಗೆ ಸಲ್ಲಿಸುತ್ತಿರುವ ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಗುರುತಿಸುವ ಮತ್ತು ಪ್ರೋತ್ಸಾಹಿಸುವ ಸಲುವಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಈ ವರ್ಷದ ಪ್ರಶಸ್ತಿಯನ್ನು ಪಡೆದ ಎಲ್ಲಾ ದೇಶಗಳ ವಿಜೇತರಿಗೆ ಅಕ್ಟೋಬರ್ 9ರಂದು ಬ್ರೆಜಿಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕ ಪ್ರದಾನ ಮಾಡಲಾಗುತ್ತದೆ. ಬಳಿಕ ದೆಹಲಿಯಲ್ಲಿರುವ UNDP ಕಚೇರಿಯಲ್ಲಿ ಪ್ರತ್ಯೇಕ ಸಮಾರಂಭ ಏರ್ಪಡಿಸಿ ಬೀಬಿ ಫಾತಿಮಾ ಮಹಿಳಾ ಸಂಘಕ್ಕೆ ಖುದ್ದಾಗಿ ಪ್ರಶಸ್ತಿಯನ್ನು ಹಸ್ತಾಂತರಿಸಲಾಗುತ್ತದೆ.